# ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ,
ಬೆಂಗಳೂರು – 560 001.

## ನಮೂನೆ – 2

(ನಿಯಮ 3ರ ಉಪನಿಯಮ 5(ಬಿ)

ಪ್ರಮಾಣ ಪತ್ರ ಸಂಖ್ಯೆ: 294:99–2000

ಶ್ರೀ ಗುರುದೇವ ರಾನಡೆ [illegible] ಶಿಕ್ಷಣ ಸಂಸ್ಥೆ.
ಜಮಖಂಡಿ, ಬಾಗಲಕೋಟೆ ಜಿಲ್ಲೆ

ಇದರ ಗೌರ್ವನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ, 1983 (ಕರ್ನಾಟಕ ಆ್ಯಕ್ಟ್ 1 ಆಫ್ 1995) ಸೆಕ್ಷನ್ 31 ರಂತೆ ಇಪ್ಪತ್ತೆಂಟನೇ ಜುಲೈ ತಿಂಗಳ ಒಂದು ಸಾವಿರದ ಒಂಬೈನೂರ ತೊಂಭತ್ತೊಂಭತ್ತರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ..

1. ಕ್ರಮ ಸಂಖ್ಯೆ : 294:99–2000
2. ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ. : ವಿದ್ಯಾಭವನ ಖಾಸಗಿ ಪ್ರಾಥಮಿಕ ಶಾಲೆ, ಅವ್ವೆವಾಡ ಜಮಖಂಡಿ, ಬಾಗಲಕೋಟೆ ಜಿಲ್ಲೆ
3. ಅನುಮತಿ ನೀಡಿದ ತರಗತಿಗಳು : 5 ರಿಂದ 7
4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : 1999–2000
5. ಅನುಮತಿ ನೀಡಿದ ಮಾಧ್ಯಮ : ಕನ್ನಡ
6. ಶುಲ್ಕ ಪಾವತಿ ಮಾಡಿರುವುದು : ರೂ: 5,000–00

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ 294, ಪುಟ ಸಂಖ್ಯೆ 147, ವಾಲ್ಯೂಂ ಸಂಖ್ಯೆ 2ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

MANAGER
Vidyabhavan International Public School
Hullyal Cross, JAMKHANDI-587301
Dist. Bagalkot.

PRINCIPAL
Vidya Bhavan International Public School (R)
Hullyal Cross, JAMKHANDI

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.

1. ಈ ನೋಂದಾವಣೆಯು ನಿಯಮ 3ರ (4) ಮತ್ತು (5) ಕ್ಕೆ ಒಳಪಟ್ಟಿರುತ್ತದೆ.

2. ಗೌರ್ವನಿಂಗ್ ಕೌನ್ಸಿಲ್‌ರವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣಗಳು, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4. ಈ ಶಿಕ್ಷಣ ಸಂಸ್ಥೆಗೆ ____ಕನ್ನಡ____ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ತೆರೆಯಲು ನೋಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್‌ಇ ಎಸ್ 98, ದಿನಾಂಕ : 17-03-1999 ರನ್ವಯ ಪರಿಶೀಲಿಸಲಾಗಿದೆ.

____ಬಾಗಲಕೋಟೆ ಜಿಲ್ಲಾ____ ಉಪ ನಿರ್ದೇಶಕರ ವರದಿಯನ್ವಯ ಈ ಸಂಸ್ಥೆಯು ಶಾಲೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ 2 ಕಿ.ಮೀ. ವಿಸ್ತೀರ್ಣದೊಳಗಿನ ಪ್ರದೇಶದಲ್ಲಿ ____2____ ಸರ್ಕಾರಿ ಪ್ರಾಥಮಿಕ ಶಾಲೆಗಳು, ____3____ ಖಾಸಗಿ ಅನುದಾನಿತ, ಅನುದಾನರಹಿತ ಪ್ರಾಥಮಿಕ ಶಾಲೆಗಳು ಈಗ ಅಸ್ತಿತ್ವದಲ್ಲಿರುತ್ತವೆ. ಹಾಗೂ ಈ ಶಾಲೆಗಳು ಸದರಿ ಪ್ರದೇಶದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಿರುವುದನ್ನು ಮನಗಾಣಲಾಗಿದೆ. ಅದಾಗ್ಯೂ ಸರ್ವೋಚ್ಚ ನ್ಯಾಯಾಲಯವು ಉನ್ನಿಕೃಷ್ಣನ್ ಪ್ರಕರಣದಲ್ಲಿ 14 ವರ್ಷಗಳ ವಯೋಮಿತಿಯೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣದ ಸಂವಿಧಾನಾತ್ಮಕ ಹಕ್ಕನ್ನು ಎತ್ತಿಹಿಡಿದು, ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಹ ಒದಗಿಸಬಹುದೆಂದು ಹಾಗೂ ರಾಜ್ಯ ಸರ್ಕಾರವು ನಡೆಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ, ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಇಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರೈಸುತ್ತವೆಯೆಂಬ ಅಂಶವನ್ನು ಎತ್ತಿಹಿಡಿದಿದೆ. ಈ ಸ್ಥಳದಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯ ಅಗತ್ಯತೆಯು ಇಲ್ಲದಿದ್ದರೂ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ / ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಮತ್ತು ಪೋಷಕರಿಗೆ / ಮಕ್ಕಳಿಗೆ ಪಟ್ಟಣ ಆಯ್ಕೆ ಸ್ವಾತಂತ್ರ್ಯ ನೀಡುವ ಉದ್ದೇಶದಿಂದಲೂ ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಸ್ವಯಂ ಪ್ರೇರಣೆಯಿಂದ ಸದರಿ ಸ್ಥಳದಲ್ಲಿ ಮತ್ತೊಂದು ಶಾಲೆಯನ್ನು ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ತೆರೆಯಲು ಇಚ್ಛಿಸಿರುವುದರಿಂದ, ಸದರಿ ಶಾಲೆಯನ್ನು ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ.

5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

7. ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಆದೇ ಮಂಡಳಿಯು ಆದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ಶಾಲೆಯನ್ನು ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

8. ಸರ್ಕಾರಿ ಆದೇಶ ಸಂಖ್ಯೆ : ಇಡಿ 23 ಪಿಜಿಸಿ 94, ದಿನಾಂಕ : 29–4–94 ರಂತೆ 1 ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗಳಿಗೆ 5ನೇ ತರಗತಿಯಿಂದ ಆಂಗ್ಲಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೊಂದಾಯಿಸಲಾಗಿದೆ. ಭಾಷಾ ನೀತಿಯ ಷರತ್ತಿಗೆ ಒಳಪಟ್ಟು ನೊಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ: ಇಲಾಖೆಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ನೊಂದಣಿಯನ್ನು ರದ್ದು ಪಡಿಸಲಾಗುವುದು.

ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

10. ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ, 1983 (ಕರ್ನಾಟಕ ಆಕ್ಟ್ 1 ಆಫ್ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಹಾಗೂ ರಚಿಸಲಾದ ಮತ್ತು ಆಗಿಂದಾಗ್ಗೆ ರಚಿಸಲಾಗುವ ನಿಯಮಗಳ ಸಂಬಂಧದಡಿಯಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲಾ ಷರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

11. ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೊಂದಣಿಯಾಗಿರುವ ಶಾಲೆಗಳೆಲ್ಲವೂ ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಡಿ 175 ಪಿ ಎಂ ಸಿ 95, ದಿನಾಂಕ : 7–9–98 ಮತ್ತು ಇಡಿ 175 ಪಿ ಎಂ ಸಿ 97 ದಿನಾಂಕ : 29 –12–1998 ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

13. ಶಾಲೆಯು ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಜಿಲ್ಲಾ ಉಪ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಪ್ರತಿ 3 ವರ್ಷಗಳಿಗೊಮ್ಮೆ ಮಾನ್ಯತೆಯನ್ನು ನವೀಕರಿಸಿಕೊಳ್ಳತಕ್ಕದ್ದು.

14. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

15. ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ

MANAGER
Vidyabhavan International Public School
Hullyal Cross, JAMKHANDI-587301.
Dist. Bagalkot.

PRINCIPAL
Vidya Bhavan International
Public School (R)
Hulyal Cross, JAMKHANDI.
Pin-587301 Dist. Bagalkot

16. ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದ 6ರ ಅಡಿಯಲ್ಲಿ ಉಪಬಂಧ 36 ರಿಂದ 39ರಂತೆ ನೋಂದಣಿ ಮಾಡಿದ ಎಲ್ಲಾ ಶಾಲೆಗಳು 'ರೆಕಗ್ನಿಷನ್' ಹಾಗೂ 'ಪ್ರಾವಿಷನಲ್ ರೆಕಗ್ನಿಷನ್' ವ್ಯಾಪ್ತಿಗೆ ಬರುವುದು.

17. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

18. ಕರ್ನಾಟಕ ಶಿಕ್ಷಣ ಮಸೂದೆ, 1983ರ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯದ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳನ್ನು ಒಂದು ವರ್ಷದೊಳಗೆ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೇ ತಿಳಿಸತಕ್ಕದ್ದು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ರದ್ದಾಗುವುದು.

ದಿನಾಂಕ: 26/7/99

ನಿರ್ದೇಶಕರು
(ಪ್ರಾಥಮಿಕ ಶಿಕ್ಷಣ)
ಮತ್ತು ನೋಂದಣಿ ಪ್ರಾಧಿಕಾರ

MANAGER
Vidyabhavan International Public School
Hullyal Cross, JAMKHANDI-587301
Dist. Bagalkot.

PRINCIPAL
Vidya Bhavan International
Public School (R)
Hulyal Cross, JAMKHANDI.
Pin-587301 Dist. Bagalkot